**(ಇಂದು ದಿಃ 17.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)**

ಮುಂದುವರೆದ ಮುಖ್ಯ ವಿಚಾರಣೆ ಃ- ಶ್ರೀ ಎನ್ ಆರ್ ವಕೀಲರಿಂದ ಅರ್ಜಿದಾರರ ಪರ ಃ-

ಈ ದಿನ ನಾನು ನನ್ನ ಮುಂದುವರೆದ ಮುಖ್ಯ ವಿಚಾರಣೆಯಾಗಿ ಪ್ರತಿಜ್ಞಾ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನ್ನ ತಿಳುವಳಿಕೆಯ ಮೇರೆಗೆ ಬರೆಯಲ್ಪಟ್ಟಿರುತ್ತವೆ ಮತ್ತು ಅವು ಸತ್ಯವಾಗಿರುತ್ತವೆ. ಪ್ರತಿಜ್ಞಾ ಪತ್ರಕ್ಕೆ ಸಹಿ ಮಾಡಿರುತ್ತೇನೆ.

ಆದ್ದರಿಂದ ಅರ್ಜಿಯಲ್ಲಿ ಕೇಳಿದಂತೆ ಪರಿಹಾರ ನೀಡಲು ವಿನಂತಿ.

ಪಾಟೀ ಸವಾಲು ಃ- ಶ್ರೀ ವಿವಿಸಿ ವಕೀಲರಿಂದ 2 ನೇ ಎದುರುದಾರರ ಪರ ಃ-

ಸದರಿ ದಿನ ನನ್ನ ಹೆಂಡತಿಯಾದ ಅನುಸೂಯಾ, ಸುನೀಲ್ ಹಾಗೂ ಸೊಸೆಯಾದ ಪ್ರಮೀಳಾ ಸೇರಿ ಆಟೋರಿಕ್ಷಾದಲ್ಲಿ ಹೋಗುತ್ತಿದ್ದರು. ಸದರಿ ದಿನ ಆಟೋರಿಕ್ಷಾದಲ್ಲಿ ಸುಮಾರು 10 ಜನ ಪ್ರಯಾಣ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ದಿನ ಸುಮಾರು 3 ಜನರು ಚಾಲಕನ ಪಕ್ಕದಲ್ಲಿ ಕುಳಿತಿದ್ದರು ಎಂದರೆ ಸರಿಯಲ್ಲ. ಹೆಚ್ಚಿನ ಪ್ರಯಾಣಿಕರನ್ನು ತೆಗೆದುಕೊಂಡು ಹೋಗಿದ್ದರಿಂದ ಆಟೋರಿಕ್ಷಾ ಚಾಲಕನ ವಿರುದ್ಧ ಅಂತಿಮ ವರದಿಯನ್ನು ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ಅಪಘಾತಕ್ಕೆ ಆಟೋ ಚಾಲಕನು ಸಹ ಸಮನಾದ ಕಾರಣೀಕರ್ತ ಎಂದರೆ ಸರಿಯಲ್ಲ. ಮೃತ ಸುನೀಲ್ ರವರಿಗೆ ಇಬ್ಬರು ಮಕ್ಕಳು ಇರುತ್ತಾರೆ. ಸದರಿ ಮಕ್ಕಳು ನನ್ನ ಬಳಿ ಇರುತ್ತವೆ ಮತ್ತು ಇಂದು ನ್ಯಾಯಾಲಯಕ್ಕೆ ಕರೆತಂದಿರುತ್ತೇನೆ. ಅಪಘಾತದ ಸಮಯದಲ್ಲಿ ನನ್ನ ಹೆಂಡತಿಗೆ 60 ವರ್ಷ ವಯಸ್ಸು ಇರಬಹುದು. ನನ್ನ ಮಗ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಅದಕ್ಕೆ ಯಾವುದೇ ಅದಾಯ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡತಿಗೆ ಮಾಸಿಕವಾಗಿ ರೂ.24,000/- ಆದಾಯ ಇತ್ತು ಎಂದು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆಧಾರ ರಹಿತವಾಗಿ ಪರಿಹಾರ ಕೋರಿದ್ದೇನೆ ಎಂದರೆ ಸರಿಯಲ್ಲ. ನನಗೆ ಒಟ್ಟು ಆರು ಜನ ಮಕ್ಕಳು ಇರುತ್ತಾರೆ. 2 ರಿಂದ 5ನೇ ಅರ್ಜಿದಾರರು ಕೂಲಿ ಕೆಲಸ ಮಾಡುತ್ತಾರೆ ಎಂದರೆ ಸರಿ. 2 ರಿಂದ 5 ನೇ ವಿವಾಹ ಆಗಿದೆ ಎಂದರೆ ಸಾಕ್ಷಿಯು ಮೂರು ಜನರ ವಿವಾಹ ಆಗಿದೆ ಎಂದು ನುಡಿಯುತ್ತಾರೆ. ಸದರಿಯವರು ಬೇರೆ ವಾಸವಿರುತ್ತಾರೆ. 2 ರಿಂದ 5 ನೇ ಅರ್ಜಿದಾರರು ನನ್ನ ಹೆಂಡತಿಯ ಆದಾಯದ ಮೇಲೆ ಅವಲಂಬಿತವಾಗಿರಲಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ- ಶ್ರೀ ಎಲ್ ಕೆ ಎಂ ವಕೀಲರಿಂದ 1 ನೇ ಎದುರುದಾರರ ಪರಃ-

ಕೂಗಿಸಲಾಯಿತು ಬರಲಿಲ್ಲ, ಸಕಾರಣ ಕಂಡುಬರದಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಪ್ರಭಾರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಎಮ್.ಎ.ಸಿ.ಟಿ., ಆಳಂದ

ಎಮ್.ವಿ.ಸಿ.ನಂ.
ಪಿಡಬ್ಲೂ 1